ರೇಡಿಯೋ ಇರುವ ಟೇಪ್‌ರೆಕಾರ್ಡರ್‌ರನ್ನು ಬಾಪನಿಗೆ ಉಡುಗೊರೆಯಾಗಿ ನೀಡಿದರು.

ಮಡಿಕೇರಿ ನಗರದಲ್ಲಿ ಹುಟ್ಟಿ ಬೆಳೆದಿದ್ದ ಉಮ್ಮನಿಗೆ ಕರೆಂಟ್ ಇಲ್ಲದ, ಹಂಚುಮನೆಯಲ್ಲದ, ಶೌಚಾಲಯವಿಲ್ಲದ, ಸುತ್ತಲೂ ಕಾಫಿ ತೋಟವೇ ಇರುವ ಮುಳಿಹುಲ್ಲಿನ ಮೂಲೆಯಂಗಡಿ ಮಹಾನ್ ಬೇಸರದ ತಾಣವಾಗಿ ಪರಿವರ್ತನೆಯಾಗಿತ್ತು. ಅಂತಹ ಸಂದರ್ಭದಲ್ಲಿ ಬೆಹರೈನ್ ದೇಶದಿಂದ ಉಡುಗೊರೆಯಾಗಿ ಬಂದ ಪ್ಯಾನಸೋನಿಕ್ ಟೇಪ್‌ರೆಕಾರ್ಡರ್ ಉಮ್ಮನಲ್ಲಿ ಜೀವಚೈತನ್ಯವನ್ನು ಮರುಪೂರಣಗೊಳಿಸಿತ್ತು. ಆ ಕಾಲಕ್ಕೆ ಸೆಂಟು, ಅತ್ತರು, ಸೋಪು, ಚಾಕಲೇಟ್, ಟಾರ್ಚು, ವಾಚು, ಎಲೆಕ್ಟ್ರಿಕ್ ವಸ್ತುಗಳನ್ನು ಹೊರದೇಶಗಳಿಂದ ತರುವುದೇ ದೊಡ್ಡ ವಿಚಾರವಾಗಿತ್ತು. ಕುಟುಂಬಪರಿವಾರ ಈ ವಸ್ತುಗಳಿಗಾಗಿ ಬಕಪಕ್ಷಿಗಳಂತೆ ಕಾದುಕುಳಿತುಕೊಳ್ಳುತ್ತಿತ್ತು. ಬಾಕ್ಸ್ ಓಪನ್ ಮಾಡಿದ ಕ್ಷಣಾರ್ಧದಲ್ಲೇ ವಿದೇಶದಿಂದ ತಂದ ಎಲ್ಲಾ ವಸ್ತುಗಳು ಖಾಲಿಖಾಲಿಯಾಗುತ್ತಿದ್ದವು. ನಮ್ಮಲ್ಲಿ ಸಿಗದ್ದು ಅಲ್ಲಿ ಸಿಗುತ್ತೆ. ಅಲ್ಲಿ ಸಿಗೋದೆಲ್ಲಾ ಬ್ರ್ಯಾಂಡೆಡ್ ಎಂಬ ನಂಬಿಕೆ ಜನರಲ್ಲಿ ಒಡಮೂಡಿತ್ತು. 1993ರಲ್ಲಿ ಭಾರತ ಎಲ್‌ಪಿಜಿಗೆ (ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳಿಗೆ) ತನ್ನನ್ನು ಮುಕ್ತಗೊಳಿಸಿತೋ ಆ ನಂತರ ವಿದೇಶಿ ವಸ್ತುಗಳು ಸ್ವದೇಶದಲ್ಲೇ ಮುಕ್ತವಾಗಿ ಸಿಗಲಾರಂಭಿಸಿದವು.

ಆಗಲೂ ಮೂಲೆಯಂಗಡಿಗೆ ಕರೆಂಟ್ ಬಂದಿರಲಿಲ್ಲ. ಮಾದಾಪುರದ ಗ್ಯಾರೇಜ್‌ನಿಂದ ಹಳೆಯ ಜೀಪ್‌ನ ಕಟ್ಟೆ ಬ್ಯಾಟರಿಯನ್ನು ಚಾರ್ಜ್ ಮಾಡಿಸಿ ತಂದ ಬಾಪ ಬೆಹರೈನ್‌ನಿಂದ ತಂದ ಮೇಡ್ ಇನ್ ಜಪಾನ್‌ನ ಪ್ಯಾನಸೋನಿಕ್ ಟೇಪ್‌ರೆಕಾರ್ಡರ್‌ಗೆ ವಿಧ್ಯುಕ್ತ ಚಾಲನೆಯನ್ನು ನೀಡಿದ್ದರು. ಆ ಕಾಲಕ್ಕೆ ಮಾಪ್ಪಿಳ್ಳೆ ಪಾಟ್‌ನ ಆಡಿಯೋ ಕ್ಯಾಸೆಟ್‌ಗಳು ಮಡಿಕೇರಿ ಬಸ್ಸು ನಿಲ್ದಾಣದ ಹಿಂದಿರುವ ಅಂಗಡಿಗಳಲ್ಲಿ ಸಿಗುತ್ತಿದ್ದವು. 2018ರಲ್ಲಿ ಪ್ರವಾಹ ಬಂದು ಆ ಬಸ್ಸು ನಿಲ್ದಾಣವೇ ಇಲ್ಲವಾಯಿತು. ಅದಕ್ಕೂ ಮೊದಲೇ ಆಡಿಯೋ ಕ್ಯಾಸೆಟ್‌ಗಳ ಕಾಲಮುಗಿದು ವಿಸಿಆರ್, ಸಿಡಿ, ಡಿವಿಡಿ, ಪೆನ್‌ಡ್ರೈವ್ ಟ್ಯಾಬ್‌ನಲ್ಲಿ ಹಾಡುಕೇಳುವುದು ಮುಗಿದು ಹೋಗಿ ಮೊಬೈಲ್, ಬ್ಲೂಟೂಥ್‌ಸ್ಪೀಕರ್, ಯೂಟ್ಯೂಬ್‌ವರೆಗೂ ಬಂದು ನಿಂತಿದ್ದೇವೆ.

ಎ.ವಿ. ಮಹಮ್ಮದ್, ವಿ.ಎಂ. ಕುಟ್ಟಿ, ವಿಲ್ಲಿಯಾಲ್ ಫಾಸಿಲಾ, ಇರೋನೋಳಿ ಮೂಸಾ, ಕೆ.ಜೆ. ಜೇಸುದಾಸ್, ರಂಲಾ ಬೇಗಂ, ರೆಹನಾ, ಕೆ.ಎಸ್. ಚಿತ್ರಾ, ಅಜೀಜ಼್ ತೈಯನೇರಿ, ಎಂ.ಜಿ. ಶ್ರೀಕುಮಾರ್, ಕಣ್ಣೂರ್ ಶರೀಫ್ ಅವರ ಮಾಪ್ಪಿಳ್ಳೆ ಪಾಟ್‌ಗಳ ಸಂಗ್ರಹವೇ ಮೂಲೆಯಂಗಡಿಗೆ ಬಂದು ಸೇರಿತು. ವಿ.ಎಂ. ಕುಟ್ಟಿ ಮತ್ತು ವಿಲ್ಲಿಯಾಲ್ ಫಾಸಿಲಾ ಹಾಡಿರುವ 'ಪಡಪ್ ಪಡಪ್ಪೋಡ್ ಪಿರುಶತ್ತಿಲ್ ನಿನ್ನೋಳಿ ಪಡಚೋನ್‌ದೇ ಕಾರುಣ್ಯಂ ಕಿಟ್ಟುನ್ನದ್ ಕಂಡೋಳಿ' (ಸೃಷ್ಟಿಗಳ ಜೊತೆಯಲ್ಲಿ ಸೃಷ್ಟಿಗಳು ಸ್ನೇಹದಿಂದ ಇದ್ದರೆ ದೇವರ ಕರುಣೆಯೂ ಖಂಡಿತವಾಗಿ ಎಲ್ಲರಿಗೂ ದಕ್ಕುತ್ತದೆ. ಜಾತಿ, ಧರ್ಮ ಮರೆತು ಸಹೋದರರಂತೆ ಸ್ನೇಹದಿಂದ ಬದುಕಿ) ಎಂಬ ಹಾಡು ಸೌಹಾರ್ದ ಪರಂಪರೆಯೊಂದನ್ನು ಅತೀ ಸೂಕ್ಷ್ಮವಾಗಿ ಚಿತ್ರಿಸಿದ ಆ ಕಾಲದ ಪ್ರಸಿದ್ಧ ಹಾಡಾಗಿತ್ತು. ಈ ಹಾಡು ಉಮ್ಮನಿಗೆ ಎಲ್ಲಾ ಕಾಲಕ್ಕೂ ನೆಚ್ಚಿನ ಗೀತೆಯೇ ಸರಿ. ಇತ್ತೀಚೆಗಂತೂ ಉಮ್ಮ ಯೂಟ್ಯೂಬ್‌ನಲ್ಲಿ ಸಾವಿರ ಸಲವಾದರೂ ಈ ಹಾಡನ್ನು ಕೇಳಿದ್ದಾಳೆ. ಮೂಲೆ ಅಂಗಡಿಯಲ್ಲಿ ಉಮ್ಮನಿಗಿದ್ದ ಒಂದೇ ಒಂದು ಆಶಾಕಿರಣ ಟೇಪ್‌ರೆಕಾರ್ಡರ್‌ನಲ್ಲಿ ಮಾಪಿಳ್ಳೆಪಾಟ್ ಕೇಳುವುದು, ರೇಡಿಯೋದಲ್ಲಿ ಸಿಲೋನ್ ಕೇಂದ್ರದಿಂದ ಪ್ರಸಾರವಾಗುವ ತಮಿಳು, ಮಲಯಾಳಂ ಕಾರ್ಯಕ್ರಮ ಆಲಿಸುವುದೇ ಆಗಿತ್ತು. ಆ ಕಾಲಕ್ಕೆ ಕೇರಳದಲ್ಲಿ ಮಾಪಿಳ್ಳೆಪಾಟ್ ಹಾಡುವ ಮುಸ್ಲಿಂ ಮಹಿಳೆಯರ ಸಂಖ್ಯೆ ಹೆಚ್ಚಿತ್ತು. ಮತ್ತು ಕೇರಳ ಈ ಬಗೆಯ ಪ್ರಗತಿಶೀಲ ನಿರೂಪಣೆಗಳಿಂದಲೇ ತನ್ನ ಅಸ್ಮಿತೆಯನ್ನು ಕಾಪಿಟ್ಟುಕೊಂಡಿದೆ ಎಂದೆನ್ನಿಸುತ್ತದೆ.

ಮೂಲೆಯಂಗಡಿ ಬಿಟ್ಟು ನಾವು ಮಾದಾಪುರದಲ್ಲಿ ಮನೆ ಮಾಡಿದ ಮೇಲೆ ಮಸೀದಿ ಪಕ್ಕದಲ್ಲಿ ಬಾಪ 'ಮಾರ್ಡನ್ ಸ್ಟೋರ್' ಎಂಬ ಹೆಸರಿನ ಅಂಗಡಿಯೊಂದನ್ನು ಆರಂಭಿಸಿದರು. ಮೈಸೂರಿನ ಗಾಂಧಿ ಸ್ಕ್ವೈರ್, ಕೆಟಿ ಸ್ಟ್ರೀಟ್‌ಗಳಲ್ಲಿನ ಮಾರ್ವಾಡಿಗಳ ಅಂಗಡಿಯಿಂದ ರೇಡಿಯೋ, ಟೇಪ್‌ರೆಕಾರ್ಡರ್, ಸ್ಪೀಕರ್, ವಾಕ್‌ಮನ್, ಕನ್ನಡ, ತಮಿಳು, ಮಲಯಾಳಂ, ಹಿಂದಿ ಹಾಡುಗಳ, ಮಾಪ್ಪಿಳ್ಳೆಪಾಟ್, ತುಳು ಹಾಸ್ಯನಾಟಕ, ಕನ್ನಡ ಹಾಸ್ಯನಾಟಕಗಳ ಆಡಿಯೋ ಕ್ಯಾಸೆಟ್‌ಗಳನ್ನು ತಂದು ಅಂಗಡಿಯಲ್ಲಿ